**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:29-03-2021.

# ಆದೇಶ

1. ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯವು ಆದೇಶ ಸಂಖ್ಯೆ:40-3/2020-ಡಿಎಂ-I(ಎ), ದಿನಾಂಕ:27.01.2021ರಲ್ಲಿ ದೇಶಾದ್ಯಂತ ಕೋವಿಡ್-19 ಸೋಂಕು ನಿಗಾವಣೆ, ನಿಯಂತ್ರಣ ಮತ್ತು ಜಾಗ್ರತೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ದಿನಾಂಕ:28.02.2021ರವರೆಗೆ ಜಾರಿಯಲ್ಲಿರುವಂತೆ ಹೊರಡಿಸಿದ್ದನ್ನು ದಿನಾಂಕ:26.02.2021ರ ಆದೇಶದಲ್ಲಿ ದಿನಾಂಕ:31.03.2021ರವರೆಗೆ ಜಾರಿಯಲ್ಲಿರುವಂತೆ ಮುಂದುವರೆಸಿದೆ. ಅದರನ್ವಯ, ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020, ದಿನಾಂಕ:28.01.2021ರಲ್ಲಿ ಕೋವಿಡ್-19 ವೈರಾಣು ಸೋಂಕು ನಿಗಾವಣೆ, ನಿಯಂತ್ರಣ ಮತ್ತು ಜಾಗ್ರತೆಗೆ ಸಂಬಂಧಿಸಿದಂತೆ ಹೊರಡಿಸಿದ್ದ ಮಾರ್ಗಸೂಚಿಗಳನ್ನು ದಿನಾಂಕ:01.03.2021ರ ಆದೇಶದಲ್ಲಿ ದಿನಾಂಕ:31.03.2021ರವರೆಗೆ ಜಾರಿಯಲ್ಲಿರುವಂತೆ ಮುಂದುವರೆಸಿದೆ.

2. ಭಾರತ ಸರ್ಕಾರದ ಗೃಹ ಮಂತ್ರಾಲಯವು ಪ್ರಸ್ತುತ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಆದೇಶ ಸಂಖ್ಯೆ:40-3/2020-ಡಿಎಂ-I(ಎ), ದಿನಾಂಕ:23.03.2021ರಲ್ಲಿ ಕೋವಿಡ್-19 ಸೋಂಕು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ದಿನಾಂಕ:30.04.2021ರವರೆಗೆ ಜಾರಿಯಲ್ಲಿರುತ್ತದೆ.

3. ಆದ್ದರಿಂದ, ವಿಪತ್ತು ನಿರ್ವಹಣಾ ಅಧಿನಿಯಮ, 2005ರ ಸೆಕ್ಷನ್ (24)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾಗಿ ಈ ಕೆಳಗೆ ಸಹಿ ಮಾಡಿರುವ ನಾನು ಅನುಬಂಧದಲ್ಲಿರುವಂತೆ ಕೋವಿಡ್-19 ವೈರಾಣು ಸೋಂಕು ನಿಯಂತ್ರಣಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು **ದಿನಾಂಕ:01.04.2021 ರಿಂದ ದಿನಾಂಕ:30.04.2021ರವರೆಗೆ** ಜಾರಿಗೊಳಿಸಿ ಆದೇಶಿಸಿರುತ್ತೇನೆ. ಈ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, ಪೊಲೀಸ್ ಆಯುಕ್ತರು, ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ಇಲಾಖಾ ಮುಖ್ಯಸ್ಥರುಗಳು ಮತ್ತು ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸತಕ್ಕದ್ದು.

**(ಪಿ. ರವಿ ಕುಮಾರ್)**
ಮುಖ್ಯ ಕಾರ್ಯದರ್ಶಿ ಹಾಗೂ
ರಾಜ್ಯ ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

**ಕೋವಿಡ್-19 ನಿಯಂತ್ರಣಕ್ಕೆ ಮಾರ್ಗಸೂಚಿಗಳು**

**(ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 158 ಟಿಎನ್‌ಆರ್ 2020, ದಿನಾಂಕ 29ನೇ ಮಾರ್ಚ್ 2021ರ ಅನುಸಾರ)**

**ರಾಜ್ಯ ಸರ್ಕಾರ, ಜಿಲ್ಲಾಡಳಿತ ಮತ್ತು ಸಂಸ್ಥೆಗಳ ಪರಿಣಾಮಕಾರಿ ಸಮನ್ವಯದಿಂದ ರಾಜ್ಯದಲ್ಲಿ ಕಳೆದ** 5 **ತಿಂಗಳಿನಿಂದ ಕೋವಿಡ್**-19 **ಸೋಂಕು ಪ್ರಕರಣಗಳು ಇಳಿಮುಖಗೊಂಡಿದೆ**. **ಪ್ರಸ್ತುತ ರಾಜ್ಯದ ಕೆಲವು ಭಾಗಗಳಲ್ಲಿ ಕಳೆದ** 2-3 **ವಾರಗಳಿಂದ ಹೊಸದಾಗಿ ಕೋವಿಡ್**-19 **ಸೋಂಕು ಪ್ರಕರಣಗಳು ಏರಿಕೆ ಕಂಡಿದ್ದು**, **ಕಾಳಜಿವಹಿಸುವ ಅಗತ್ಯತೆ ಇದೆ**. **ಈ ಸಂದರ್ಭದಲ್ಲಿ ಕೋವಿಡ್**-19 **ಸೋಂಕು ನಿಯಂತ್ರಣದಿಂದ ಸಾಧಿಸಿದ ಪ್ರಗತಿಯನ್ನು ಒಗ್ಗೂಡಿಸಿ ಮತ್ತೊಮ್ಮೆ ವೈರಾಣು ಜಾಡು ಪತ್ತೆ**, **ಪರೀಕ್ಷೆ ಮತ್ತು ಪ್ರತ್ಯೇಕವಾಗಿಡುವ ಹಾಗೂ ಚಿಕಿತ್ಸೆ ಪ್ರಗತಿಗೊಳಿಸಿ ಕೋವಿಡ್**-19 **ಸೋಂಕು ತುರ್ತು** ನಿಯಂತ್ರಣಕ್ಕೆ **ಪರಿಣಾಮಕಾರಿ ಕ್ರಮದ ಅನುಷ್ಠಾನ ಅಗತ್ಯವಿದೆ**.

**ಭಾರತ ಸರ್ಕಾರದ ಗೃಹ ಮಂತ್ರಾಲಯದ ದಿನಾಂಕ**:27.01.2021**ರ ಮಾರ್ಗಸೂಚಿಯ ಸಮಾನಂತರವಾಗಿ ರಾಜ್ಯ ಸರ್ಕಾರವು ದಿನಾಂಕ**:28.01.2021**ರಂದು ಹೊರಡಿಸಲಾದ ಮಾರ್ಗಸೂಚಿಯಲ್ಲಿ ಅಗತ್ಯ ಪ್ರಮಾಣಿತ ಕಾರ್ಯವಿಧಾನ ಪಾಲನೆಗೆ ಒಳಪಟ್ಟು**, **ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಹಂತ ಹಂತವಾಗಿ ಪ್ರಾರಂಭಿಸಲಾಗಿದೆ**. **ಪುನರಾರಂಭಗೊಂಡ ಚಟುವಟಿಕೆಗಳ ಯಶಸ್ಸಿಗೆ** Test-Track-Treat **ಶಿಷ್ಟಾಚಾರ ರಾಜ್ಯಾದ್ಯಂತ ಜಾರಿ ಅಗತ್ಯ**. **ಅಲ್ಲದೇ**, **ಕೋವಿಡ್ ಸಂಬಂಧಿತ ಜಾಗ್ರತೆ ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕಿದ್ದು ಮತ್ತು ಜಾರಿಯಲ್ಲಿರುವ ಲಸಿಕಾ ಕಾರ್ಯಕ್ರಮವನ್ನು ಎಲ್ಲಾ ಹಂತದ ಗುಂಪುಗಳಲ್ಲೂ ಹೆಚ್ಚಿಸುವ ಅಗತ್ಯತೆ ಇದೆ**.

ಈ ಮುಂದಿನ ಮಾರ್ಗಸೂಚಿಗಳನ್ನು 1ನೇ ಏಪ್ರಿಲ್ 2021 ರಿಂದ ಜಾರಿಗೆ ಬರುವಂತೆ ಹೊರಡಿಸಲಾಗಿದೆ:

**ಕೋವಿಡ್-19 ಸೋಂಕು ಪರೀಕ್ಷೆ- ಪತ್ತೆ- ಚಿಕಿತ್ಸೆಯ ಪರಿಣಾಮಕಾರಿ ಜಾರಿ:**

**ಪರೀಕ್ಷೆ:**

1. ನಿರಂತರ ಪ್ರಯತ್ನಗಳ ಪರಿಣಾಮವಾಗಿ ರಾಜ್ಯಾದ್ಯಂತ ನಡೆಸಲಾಗುವ ದೈನಂದಿನ ಕೋವಿಡ್-19 ಪರೀಕ್ಷೆಗಳ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಪರೀಕ್ಷೆಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಏಕರೂಪವಾಗಿ ನಡೆಸುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು, ಪ್ರಕರಣಗಳು ಹೆಚ್ಚಾಗಿ ವರದಿಯಾಗಿರುವ ತಾಲ್ಲೂಕು / ವಾರ್ಡ್‌ಗಳಲ್ಲಿ ಗಣನೀಯವಾಗಿ ಹೆಚ್ಚಿನ ಪರೀಕ್ಷೆಗಳನ್ನು ನಡೆಸುವುದು. RTPCR ಪರೀಕ್ಷೆಗಳ ಪ್ರಮಾಣವನ್ನು ಶೇ.70ರಷ್ಟು ಅಥವಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ನಿಗದಿಪಡಿಸಿದಂತೆ ಹೆಚ್ಚಿಸಲು ಪ್ರಯತ್ನಿಸಬೇಕು RTPCR ಪರೀಕ್ಷೆಗಳ ಪ್ರಮಾಣವು ಕಡಿಮೆ ಇರುವ ತಾಲ್ಲೂಕು ಹಾಗೂ ನಗರ ವಾರ್ಡ್‌ಗಳಲ್ಲಿ ನಿಗದಿತ ಮಟ್ಟವನ್ನು ತಲುಪಲು ಪರೀಕ್ಷೆಯ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಬೇಕಾಗಿದೆ.

**ಪತ್ತೆ:**

2. ತೀವ್ರತರವಾದ ಪರೀಕ್ಷೆಯ ಪರಿಣಾಮವಾಗಿ ಪತ್ತೆಯಾಗುವ ಹೊಸ ಪಾಸಿಟಿವ್ ಪ್ರಕರಣಗಳನ್ನು ಕೂಡಲೇ ಪ್ರತ್ಯೇಕಿಸುವುದು / ದಿಗ್ಬಂಧಿಸುವುದು ಅತ್ಯಗತ್ಯವಾಗಿದೆ ಮತ್ತು ಸೋಂಕಿತರ ಸಂಪರ್ಕಗಳನ್ನು ಶೀಘ್ರವಾಗಿ ಪತ್ತೆಹಚ್ಚಿ, ಅದೇ ರೀತಿ ಅವರನ್ನು ಪ್ರತ್ಯೇಕಿಸಿ / ದಿಗ್ಬಂಧಿಸಿ ಇರಿಸಬೇಕಾಗಿದೆ. ಈ ಪ್ರಕಾರ ಕಂಟೈನ್‌ಮೆಂಟ್ ವಲಯಗಳನ್ನೂ ಗುರುತಿಸಿ, ಅಂತಹ ವಲಯಗಳಲ್ಲಿ ಧಾರಕ ಕ್ರಮಗಳನ್ನು ಜಾರಿಗೆ ತರಬೇಕು.

3. ಕೋವಿಡ್-19 ಸೋಂಕಿನ ಹೆಚ್ಚು ಪ್ರಕರಣಗಳು ಕಂಡುಬಂದಿರುವಂತಹ ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಕಂಟೈನ್‌ಮೆಂಟ್ ವಲಯಗಳ ಗಡಿ ಗುರುತಿಸುವಿಕೆಯಿಂದ ಸೋಂಕು ಪ್ರಸರಣದ ಸರಪಳಿಯನ್ನು ತುಂಡರಿಸಲು ಮತ್ತು ಸೋಂಕು ಹರಡುವಿಕೆಯನ್ನು ನಿಯಂತ್ರಿಸಲು ಸಹಕಾರಿಯಾಗಲಿದೆ. ಜಿಲ್ಲಾಡಳಿತಗಳು ತಳ ಹಂತದಲ್ಲಿ ಕಂಟೈನ್‌ಮೆಂಟ್ ವಲಯಗಳ ಗಡಿ ಗುರುತಿಸುವಿಕೆಗೆ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ಮತ್ತು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಈ ಸಂಬಂಧವಾಗಿ ನಿರ್ದಿಷ್ಟಪಡಿಸಿದ ಮಾರ್ಗಸೂಚಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು. ಕಂಟೈನ್‌ಮೆಂಟ್ ವಲಯಗಳ ಮಾಹಿತಿಯನ್ನು ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಆಯುಕ್ತರು, ಬಿಬಿಎಂಪಿ ಮತ್ತು ಸ್ಥಳೀಯ ಪ್ರಾಧಿಕಾರಗಳ ಮೂಲಕ ವೆಬ್‌ಸೈಟ್‌ನಲ್ಲಿ ಅಳವಡಿಸುವುದು ಹಾಗೂ ಈ ಮಾಹಿತಿಯನ್ನು ನಿರಂತರವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದೊಂದಿಗೆ ಹಂಚಿಕೊಳ್ಳುವುದು.

4. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರಡಿಸಿರುವ ಮಾರ್ಗಸೂಚಿಯನ್ವಯ ಕಂಟೈನ್‌ಮೆಂಟ್ ವಲಯಗಳನ್ನು ಗುರುತು ಮಾಡಿರುವ ಪ್ರದೇಶಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು;

   i. ಕಂಟೈನ್‌ಮೆಂಟ್ ವಲಯಗಳಲ್ಲಿ ಅತ್ಯಗತ್ಯ ಚಟುವಟಿಕೆಗಳಿಗೆ ಮಾತ್ರ ಅವಕಾಶ ಕಲ್ಪಿಸುವುದು.

   ii. ಅಗತ್ಯ ಸರಕು ಪೂರೈಕೆ ಹಾಗೂ ತುರ್ತು ಆರೋಗ್ಯ ಸೇವೆ ಹೊರತುಪಡಿಸಿ ಈ ವಲಯಗಳಲ್ಲಿ ಹೊರ ಹೋಗುವ ಅಥವಾ ಒಳಗೆ ಬರುವ ಜನರ ಚಲನವಲನಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಾದ ಕ್ರಮ ಕೈಗೊಳ್ಳುವುದು.

   iii. ಈ ಉದ್ದೇಶಕ್ಕಾಗಿ ರಚಿಸಲಾಗಿರುವ ಕಣ್ಗಾವಲು ತಂಡಗಳು ನಿರಂತರವಾಗಿ ಮನೆ-ಮನೆ ಪರಿಶೀಲನೆ ನಡೆಸುವುದು.

   iv. ನಿಗದಿಪಡಿಸಿರುವ ಶಿಷ್ಟಾಚಾರದೊಂದಿಗೆ ಪರೀಕ್ಷೆಗಳನ್ನು ಕೈಗೊಳ್ಳುವುದು.

   v. ಕೋವಿಡ್-19 ಪಾಸಿಟಿವ್ ಕಂಡು ಬಂದಿರುವ ವ್ಯಕ್ತಿಯ ಸಂಪರ್ಕ ಹೊಂದಿರುವ ಎಲ್ಲಾ ವ್ಯಕ್ತಿಗಳನ್ನು ಪಟ್ಟಿ ಮಾಡುವುದು, ಅವರನ್ನು ಪತ್ತೆ ಮಾಡುವುದು, ಗುರುತಿಸುವುದು, ನಿರ್ಬಂಧಿಸುವುದು ಮತ್ತು 14 ದಿನಗಳ ವರೆಗೆ ನಿಗಾ ಇಡುವುದು (ಶೇ.80ರಷ್ಟು ಸಂಪರ್ಕಿತರನ್ನು 72 ಗಂಟೆಗಳೊಳಗೆ ಅಥವಾ ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರ ತಂದಿರುವ SOPಗಳನ್ವಯ ಕೋವಿಡ್-19 ಸೋಂಕಿತರನ್ನು ಪತ್ತೆ ಹಚ್ಚಬಹುದು).

   vi. ILI / SARI ಪ್ರಕರಣಗಳನ್ನು ಆರೋಗ್ಯ ಸೌಲಭ್ಯ ಅಥವಾ ಮೊಬೈಲ್ ಕ್ಲಿನಿಕ್‌ಗಳ ಅಥವಾ ಬಫರ್ ವಲಯಗಳ ಫೀವರ್ ಕ್ಲಿನಿಕ್‌ಗಳ ಮೂಲಕ ಕಣ್ಗಾವಲಿರಿಸುವುದು.

   vii. ಬಿಬಿಎಂಪಿ, ಜಿಲ್ಲಾಡಳಿತ, ತಾಲ್ಲೂಕು ಪ್ರಾಧಿಕಾರಗಳು, ಪೊಲೀಸ್ ಮತ್ತು ಸ್ಥಳೀಯ ಪ್ರಾಧಿಕಾರಗಳು ಕಂಟೈನ್‌ಮೆಂಟ್ ವಲಯಗಳ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಬಿಬಿಎಂಪಿ, ಜಿಲ್ಲಾಡಳಿತ, ತಾಲ್ಲೂಕು ಪ್ರಾಧಿಕಾರಗಳು ಸಂಬಂಧಪಟ್ಟ ಅಧಿಕಾರಿಯನ್ನು ಹೊಣೆಗಾರನ್ನಾಗಿಸುವುದು.

**ಚಿಕಿತ್ಸೆ:**

5. ಕೋವಿಡ್-19 ಸೋಂಕಿತರನ್ನು ಚಿಕಿತ್ಸೆಗಾಗಿ ವೈದ್ಯಕೀಯ ಸೌಲಭ್ಯವಿರುವ ಕೇಂದ್ರಗಳಲ್ಲಿ / ಮನೆಯಲ್ಲಿ ಕೂಡಲೇ ಪ್ರತ್ಯೇಕಿಸುವುದು. (ಮನೆಯಲ್ಲಿನ ಪ್ರತ್ಯೇಕತೆ ಮಾರ್ಗಸೂಚಿಗೆ ಒಳಪಟ್ಟಿರುವ).

6. ಕ್ಲಿನಿಕಲ್ ಚಿಕಿತ್ಸಾ ಕ್ರಮವನ್ನು ನಿಗದಿಯಂತೆ ನಿರ್ವಹಿಸುವುದು. ಆರೋಗ್ಯ ಕಾರ್ಯಕರ್ತರು ಹಾಗೂ ಪರಿಣಿತರಿಗೆ ಸಾಮರ್ಥ್ಯಾಭಿವೃದ್ಧಿಯನ್ನು ನಿರಂತರವಾಗಿ ಎಲ್ಲಾ ಹಂತದಲ್ಲಿ ಕೈಗೊಂಡು, ನಿಗದಿಪಡಿಸಿರುವ ವೈದ್ಯಕೀಯ ಶಿಷ್ಟಾಚಾರದನ್ವಯ ಚಿಕಿತ್ಸೆ ನೀಡುತ್ತಿರುವುದನ್ನು ನಿರಂತರವಾಗಿ ಪರಿಶೀಲಿಸುವುದು.

7. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಸಂಬಂಧಿತ ಇಲಾಖೆಗಳು, ಜಿಲ್ಲಾಡಳಿತಗಳು, ಸ್ಥಳೀಯ ಪ್ರಾಧಿಕಾರಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೋಂಕಿತರ ಸಂಖ್ಯೆಯನುಸಾರ ಕೋವಿಡ್-19 ಚಿಕಿತ್ಸೆಗಾಗಿ ಅಗತ್ಯವಿರುವ ವೈದ್ಯಕೀಯ ಸೌಲಭ್ಯ ಮತ್ತು ಅಗತ್ಯವಿರುವ ಸಲಕರಣೆಗಳ ಸಮರ್ಪಕ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು.

8. ಆರೋಗ್ಯ ಕಾರ್ಯಕರ್ತರು ಹಾಗೂ ಸಂಬಂಧಪಟ್ಟ ಪರಿಣಿತರು ಸೋಂಕು ತಡೆಗಟ್ಟುವಿಕೆ ಹಾಗೂ ಸೋಂಕು ನಿಯಂತ್ರಣ ಅಭ್ಯಾಸಗಳನ್ನು ವೈದ್ಯಕೀಯ ಚಿಕಿತ್ಸೆ ನೀಡುವ ಕೇಂದ್ರಗಳಲ್ಲಿ ಪಾಲಿಸುವುದು.

**ಕೋವಿಡ್ ಸಮುಚಿತ ವರ್ತನೆ:**

9. ಬಿಬಿಎಂಪಿ / ಜಿಲ್ಲಾ ಪ್ರಾಧಿಕಾರಗಳು, ಕೋವಿಡ್-19 ಸಮುಚಿತ ವರ್ತನೆಯನ್ನು ಉತ್ತೇಜಿಸುವ ಎಲ್ಲಾ ಅತ್ಯಾವಶ್ಯಕ ಕ್ರಮಗಳನ್ನು ಕೈಗೊಳ್ಳತ್ತಕ್ಕದ್ದು. ಮುಖಗವಸುಗಳನ್ನು ಧರಿಸುವಿಕೆ, ಕೈಗಳನ್ನು ಶುಚಿಯಾಗಿಡುವಿಕೆ ಮತ್ತು ದೈಹಿಕ ಅಂತರ ಕಾಯ್ದುಕೊಳ್ಳುವಿಕೆ – ಇವುಗಳ ಕಟ್ಟುನಿಟ್ಟಿನ ಜಾರಿಯನ್ನು ಖಚಿತಪಡಿಸಿಕೊಳ್ಳಬೇಕು.

10. ನಿಗದಿಪಡಿಸಲಾದಂತೆ ಮುಖಗವಸನ್ನು ಧರಿಸದ್ದಿದರೆ ಅಂತಹವರ ವಿರುದ್ಧ ನಗರ ಪಾಲಿಕೆ ಪ್ರದೇಶಗಳಲ್ಲಿ ರೂ.250/- ಮತ್ತು ಇನ್ನಿತರ ಪ್ರದೇಶಗಳಲ್ಲಿ ರೂ.100/-ರ ದಂಡವನ್ನು ವಿಧಿಸಲು ಬಿಬಿಎಂಪಿ / ಜಿಲ್ಲಾ ಪ್ರಾಧಿಕಾರಗಳು/ ಸ್ಥಳೀಯ ಪ್ರಾಧಿಕಾರಗಳು ಕಟ್ಟುನಿಟ್ಟಿನಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

11. **ಕೋವಿಡ್**-19 **ಸೋಂಕು ಹರಡುವಿಕೆ ತಡೆಗಟ್ಟಲು ಸಾರ್ವಜನಿಕ ವಲಯಗಳಲ್ಲಿ**, **ವಾರದ ಸಂತೆಗಳಲ್ಲಿ**, **ಸಾರ್ವಜನಿಕ ಸಾರಿಗೆ ಮತ್ತು ಜನಸಂದಣಿ ಪ್ರದೇಶಗಳಲ್ಲಿ ಕಟ್ಟುನಿಟ್ಟಾಗಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದನ್ನು ನಿಗಾವಹಿಸುವುದು**. **ಈ ಸಂಬಂಧ ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ಮತ್ತು ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ** ಬಿಬಿಎಂಪಿ / ಜಿಲ್ಲಾ ಪ್ರಾಧಿಕಾರಗಳು / ಸ್ಥಳೀಯ ಪ್ರಾಧಿಕಾರಗಳು ಜಾರಿಗೊಳಿಸತಕ್ಕದ್ದು.

12. ವಿಮಾನಯಾನ, ರೈಲು ಸೇವೆ ಮತ್ತು ಮೆಟ್ರೊ ರೈಲು ಸಂಚಾರದ ಕುರಿತು ಈಗಾಗಲೇ ಪ್ರಮಾಣಿತ ಕಾರ್ಯ ವಿಧಾನಗಳು ಜಾರಿಯಲ್ಲಿದ್ದು, ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಇತರೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಲ್ಲಿಯೂ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸೂಕ್ತ ಮಾರ್ಗಸೂಚಿಯನ್ನು ಹೊರಡಿಸತಕ್ಕದ್ದು**. **ಉದಾ: ಬಸ್‌ಗಳು, ದೋಣಿಗಳು ಇತ್ಯಾದಿ**.,

13. ಕೋವಿಡ್-19 ನಿರ್ವಹಣೆ ಸಂಬಂಧ ಅನುಬಂಧ-1ರಲ್ಲಿನ ರಾಷ್ಟ್ರೀಯ ಮಾರ್ಗಸೂಚಿಗಳನ್ನು ರಾಜ್ಯಾದ್ಯಂತ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

**ನಿಗದಿಪಡಿಸಿದ ಪ್ರಮಾಣಿತ ಕಾರ್ಯವಿಧಾನ(SOPS)ಗಳಿಗೆ ಕಟ್ಟುನಿಟ್ಟಾಗಿ ಬದ್ಧರಾಗಿರುವುದು**

14. **ಕಂಟೈನ್‌ಮೆಂಟ್** ವಲಯದ ಹೊರಗೆ, ಎಲ್ಲಾ ಚಟುವಟಿಕೆಗಳಿಗೆ ಅನುಮತಿಸಿದ್ದು, ವಿವಿಧ ಚಟುವಟಿಕೆಗಳಿಗೆ ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದೆ. ಇವುಗಳು ಪ್ರಯಾಣಿಕರ ರೈಲು ಸಂಚಾರ, ವಿಮಾನಯಾನ, ಮೆಟ್ರೊ ರೈಲು, ಶಾಲೆಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು, ಶಾಪಿಂಗ್ ಮಾಲ್‌ಗಳು, ಮಲ್ಟಿಪ್ಲೆಕ್ಸ್ ಮತ್ತು ಮನರಂಜನಾ ಉದ್ಯಾನಗಳು, ಯೋಗ ಕೇಂದ್ರಗಳು ಮತ್ತು ಜಿಮ್ನಾಶಿಯಮ್‌ಗಳು, ಪ್ರದರ್ಶನ ಮಳಿಗೆಗಳು ಹಾಗೂ ಜನರ ಒಗ್ಗೂಡುವಿಕೆ ಹಾಗೂ ಅಂತಹುದೇ ಸ್ಥಳಗಳು ಹಾಗೂ ಇತ್ಯಾದಿ.

15. ಕಾಲ-ಕಾಲಕ್ಕೆ ಜಾರಿಗೊಳಿಸುವಂತಹ ಪ್ರಮಾಣಿತ ಕಾರ್ಯ ವಿಧಾನಗಳನ್ನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಜಿಲ್ಲಾ ಮತ್ತು ಸ್ಥಳೀಯ ಪ್ರಾಧಿಕಾರಗಳು ಕಟ್ಟುನಿಟ್ಟಿನ ಜಾರಿಗೆ ಹೊಣೆಗಾರರಾಗಿರುತ್ತಾರೆ.

**ಲಸಿಕಾ ಕಾರ್ಯಕ್ರಮ:**

16. ಭಾರತ ಸರ್ಕಾರವು ಕೋವಿಡ್-19 ನಿರ್ಮೂಲನೆಗೆ ಪ್ರಪಂಚದಲ್ಲಿಯೇ ಅತಿ ದೊಡ್ಡ ಮಟ್ಟದಲ್ಲಿ ಲಸಿಕಾ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಲಸಿಕೆ ಆಯ್ಕೆ, ವಿತರಣೆ ಮತ್ತು ನಿಗಾವಣೆ, ಖರೀದಿ ಮತ್ತು ದಾಸ್ತಾನು ವ್ಯವಸ್ಥೆ ಹಾಗೂ ಜನಸಂಖ್ಯೆ ಗುಂಪಿನ ಆಧಾರದ ಮೇಲೆ ಪ್ರಾಧಾನ್ಯತೆ ಕುರಿತು ಕೋವಿಡ್-19 ಲಸಿಕೆ ನಿರ್ವಹಣೆಯ ರಾಷ್ಟ್ರೀಯ ಪರಿಣಿತರ ತಂಡ (NEGVAC)ವು ಮಾರ್ಗದರ್ಶನ ಒದಗಿಸಲಿದೆ. NEGVAC ಮಾಡಿರುವಂತಹ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರವು ಪರಿಗಣಿಸಿ ಅಂತಿಮಗೊಳಿಸಿದೆ.

17. ಲಸಿಕಾ ಕಾರ್ಯಕ್ರಮವು ಸರಾಗವಾಗಿ ನಡೆಯುತ್ತಿದ್ದಾಗ್ಯೂ ರಾಜ್ಯದಲ್ಲಿ ಏರಿಳಿತಗಳಿದ್ದು, ಕೆಲವು ಜಿಲ್ಲೆ ಮತ್ತು ನಗರ ಸ್ಥಳೀಯ ಪ್ರದೇಶಗಳಲ್ಲಿ ಮಂದಗತಿಯಲ್ಲಿದ್ದು, ಕಾಳಜಿ ವಹಿಸಬೇಕಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಲಸಿಕಾ ಕಾರ್ಯದಿಂದ ಕೋವಿಡ್-19 ಸೋಂಕು ಪ್ರಸರಣದ ಸರಪಳಿ ತುಂಡರಿಕೆ ಕಠಿಣವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರವು ಅನುಮೋದಿಸಿರುವ NEGVAC ಶಿಫಾರಸ್ಸಿನನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಜಿಲ್ಲಾ ಮತ್ತು ಸ್ಥಳೀಯ ಪ್ರಾಧಿಕಾರಗಳು ಕೂಡಲೇ ಪ್ರಾಧಾನ್ಯತೆ ಹೊಂದಿದ ಗುಂಪುಗಳಲ್ಲಿ ಲಸಿಕಾ ಕಾರ್ಯದ ಪ್ರಗತಿಗೆ ಶೀಘ್ರವಾಗಿ ಕ್ರಮವಹಿಸತಕ್ಕದ್ದು.

**ದುರ್ಬಲ ವ್ಯಕ್ತಿಗಳ ರಕ್ಷಣೆ:**

18. **65** ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ವ್ಯಕ್ತಿಗಳು, ಬಹು-ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳು, ಗರ್ಭಿಣಿಯರು ಮತ್ತು **10** ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸತಕ್ಕದ್ದು.

***ಆರೋಗ್ಯ ಸೇತು* ಬಳಕೆ:**

19. ಸಂಚಾರಿ ದೂರವಾಣಿಗಳಲ್ಲಿ *ಆರೋಗ್ಯ ಸೇತು* ಆಪ್ ಬಳಕೆ ಮುಂದುವರೆಸತಕ್ಕದ್ದು, ಇದು ಸೋಂಕಿನ ಸಂಭವನೀಯ ವ್ಯಕ್ತಿಗಳಿಗೆ ಸಮಯಕ್ಕೆ ಸರಿಯಾದ ವೈದ್ಯೋಪಚಾರಕ್ಕೆ ನೆರವಾಗಲಿದೆ.

**ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು:**

20. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಜಿಲ್ಲಾಧಿಕಾರಿಗಳು ಮೇಲಿನ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸತಕ್ಕದ್ದು. ದೈಹಿಕ ಅಂತರವನ್ನು ಜಾರಿಗೊಳಿಸುವುದಕ್ಕಾಗಿ, ಆಯುಕ್ತರು, ಬೃಹತ್

ಬೆಂಗಳೂರು ಮಹಾನಗರ ಪಾಲಿಕೆ/ಜಿಲ್ಲಾಧಿಕಾರಿಗಳು ಸಾಧ್ಯವಾದಷ್ಟು ಅಪರಾಧ ದಂಡ ಸಂಹಿತೆ (CrPC), 1973ರ ಸೆಕ್ಷನ್ 144ನ್ನು ಬಳಸತಕ್ಕದ್ದು.

21. ಈ ಮೇಲ್ಕಂಡ ಕ್ರಮಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ವಿಪತ್ತು ನಿರ್ವಹಣಾ ಅಧಿನಿಯಮ, 2005ರ 51ನೇ ಪ್ರಕರಣದಿಂದ 60ನೇ ಪ್ರಕರಣದವರೆಗಿನ ಉಪಬಂಧಗಳಡಿಯಲ್ಲಿ ಅಲ್ಲದೇ ಭಾರತ ದಂಡ ಸಂಹಿತೆಯ 188ನೇ ಪ್ರಕರಣದ ಅಡಿಯಲ್ಲಿ ಮತ್ತು ಅನ್ವಯವಾಗಬಹುದಾದ ಇತರೆ ಕಾನೂನು ಉಪಬಂಧಗಳಡಿಯಲ್ಲಿ ಅವರು ಕಾನೂನು ಕ್ರಮಕ್ಕೆ ಗುರಿಯಾಗುತ್ತಾರೆ. ಈ ದಂಡನೀಯ ಉಪಬಂಧಗಳ ಆಂಗ್ಲ ಭಾಷೆಯಲ್ಲಿನ ಉಧೃತ ಭಾಗವನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.

**(ಪಿ. ರವಿ ಕುಮಾರ್)**
ಮುಖ್ಯ ಕಾರ್ಯದರ್ಶಿ ಹಾಗೂ
ರಾಜ್ಯ ಕಾರ್ಯಕಾರಿ ಸಮಿತಿ ಅಧ್ಯಕ್ಷರು

## ಅನುಬಂಧ-1

## ಕೋವಿಡ್-19 ನಿರ್ವಹಣೆಗೆ ರಾಷ್ಟ್ರೀಯ ನಿರ್ದೇಶನಗಳು

1. **ಮುಖದ ಹೊದಿಕೆ:** ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸದ ಸ್ಥಳಗಳಲ್ಲಿ ಮತ್ತು ಪ್ರಯಾಣದ ಸಮಯದಲ್ಲಿ ಮುಖದ ಹೊದಿಕೆಯನ್ನು ಧರಿಸುವುದು ಕಡ್ಡಾಯವಾಗಿದೆ.
2. **ದೈಹಿಕ ಅಂತರ:** ಪ್ರತಿಯೊಬ್ಬರೂ ಸಾರ್ವಜನಿಕ ಸ್ಥಳಗಳಲ್ಲಿ ಕನಿಷ್ಟ ಅಂತರವನ್ನು ಕಾಯ್ದುಕೊಳ್ಳತಕ್ಕದ್ದು.
   ಗ್ರಾಹಕರಲ್ಲಿ ದೈಹಿಕ ಅಂತರ ಇರುವುದನ್ನು ಅಂಗಡಿಗಳ ಮಾಲೀಕರು ಖಚಿತಪಡಿಸಿಕೊಳ್ಳತಕ್ಕದ್ದು.
3. **ಸಾರ್ವಜನಿಕ ಸ್ಥಳಗಳಲ್ಲಿ ಉಗಿಯುವುದು:** ಜುಲ್ಮಾನೆಯಿಂದ ದಂಡನೀಯವಾಗಿರುತ್ತದೆ. ಈ ಜುಲ್ಮಾನೆಯು ಸ್ಥಳೀಯ ಪ್ರಾಧಿಕಾರಗಳು ಕಾನೂನು, ನಿಯಮ ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ನಿಗದಿಪಡಿಸಬಹುದಾದಂತೆ ಇರತಕ್ಕದ್ದು.

**ಕೆಲಸದ ಸ್ಥಳಗಳಲ್ಲಿ ಹೆಚ್ಚುವರಿ ನಿರ್ದೇಶನಗಳು:**

4. **ಕೆಲಸದಲ್ಲಿ ಪಾಳಿಯ ಪದ್ಧತಿ/ವ್ಯವಹಾರ ಸಮಯ:** ಕಚೇರಿಗಳಲ್ಲಿ, ಕೆಲಸದ ಸ್ಥಳಗಳಲ್ಲಿ, ಅಂಗಡಿಗಳಲ್ಲಿ, ಮಾರುಕಟ್ಟೆಗಳಲ್ಲಿ ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಸಮುಚ್ಚಯಗಳಲ್ಲಿ ಪಾಳಿಯ ಪದ್ಧತಿ/ವ್ಯವಹಾರ ಸಮಯವನ್ನು ಅನುಸರಿಸತಕ್ಕದ್ದು.
5. **ಸ್ಕ್ರೀನಿಂಗ್ ಮತ್ತು ನೈರ್ಮಲ್ಯ:** ಎಲ್ಲಾ ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಹಾಗೂ ಸಾಮಾನ್ಯ ಪ್ರದೇಶಗಳಲ್ಲಿ ಥರ್ಮಲ್ ಸ್ಕ್ಯಾನಿಂಗ್, ಕೈ ತೊಳೆಯುವಿಕೆ ಮತ್ತು ಸ್ಯಾನಿಟೈಸರ್ ಗೆ ವ್ಯವಸ್ಥೆ ಕಲ್ಪಿಸುವುದು.
6. **ನಿಯಮಿತ ಸ್ಯಾನಿಟೈಸೇಷನ್:** ಕೆಲಸದ ಸಂಪೂರ್ಣ ಆವರಣ, ಸಾಮಾನ್ಯ ಸೌಲಭ್ಯಗಳು ಮತ್ತು ಮಾನವ ಸಂಪರ್ಕಕ್ಕೆ ಬರುವ ಎಲ್ಲಾ ಸಾಧನ ಸಲಕರಣೆಗಳನ್ನು ಉದಾರಣೆಗೆ: ಬಾಗಿಲ ಹಿಡಿಕೆಗಳು ಇತ್ಯಾದಿ ಆಗಾಗ್ಗೆ ನೈರ್ಮಲ್ಯೀಕರಣ ಮಾಡತಕ್ಕದ್ದು. ಇದನ್ನು ಕೆಲಸದ ಪಾಳಿಯ ಮಧ್ಯದಲ್ಲಿ ಸಹ ಖಾತರಿಪಡಿಸಿಕೊಳ್ಳುವುದು.
7. **ದೈಹಿಕ ಅಂತರ:** ಕೆಲಸದ ಸ್ಥಳಗಳ ಮೇಲ್ವಿಚಾರಣೆ ಹೊಂದಿರುವ ಎಲ್ಲಾ ವ್ಯಕ್ತಿಗಳು ಕೆಲಸಗಾರರ ನಡುವೆ ಪಾಳಿಗಳ ನಡುವೆ, ಸಿಬ್ಬಂದಿಗಳ ಊಟದ ವಿರಾಮ ಇತ್ಯಾದಿಗಳ ಸಂದರ್ಭದಲ್ಲಿ ಕನಿಷ್ಟ ಅಂತರವನ್ನು, ಕಾಯ್ದುಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

**(ಪಿ. ರವಿ ಕುಮಾರ್)**
ಮುಖ್ಯ ಕಾರ್ಯದರ್ಶಿ ಹಾಗೂ
ರಾಜ್ಯ ಕಾರ್ಯಕಾರಿ ಸಮಿತಿ ಅಧ್ಯಕ್ಷರು